ಹೇಳುತ್ತಿದ್ದೀರಿ. ಹಾಗಾದರೆ ಯಾವಾಗ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದು? ರಾಷ್ಟ್ರೀಯ ಹೆದ್ದಾರಿಗಳ ಬಾಬಿನಲ್ಲಿ ನಮ್ಮ ರಾಜ್ಯ ಕಡಿಮೆ ಹಣ ಪಡೆಯುತ್ತಿದೆ ಎನ್ನುವ ಅಭಿಪ್ರಾಯ ಇದೆ. ಎಲ್ಲಾ ರಾಜ್ಯಗಳಿಗಿಂತ ಕರ್ನಾಟಕ ರಾಷ್ಟ್ರೀಯ ಹೆದ್ದಾರಿಗಳ ಬಾಬಿನಲ್ಲಿ ಹೆಚ್ಚು ಹಣ ಪಡೆಯಲು ಹಿಂದೆ ಬಿದ್ದಿದೆ; ಇದು ನಿಜವೇ? ಹಾಗಿದ್ದ ಪಕ್ಷದಲ್ಲಿ ಕೇಂದ್ರದಿಂದ ತಾವು ಹೆಚ್ಚಿಗೆ ಹಣ ಪಡೆಯುವುದಕ್ಕೆ ಏನು ಕಾರ್ಯಕ್ರಮ ರೂಪಿಸಿಕೊಂಡಿದ್ದೀರಿ ಎನ್ನುವುದನ್ನು ಹೇಳಬೇಕು?

ಶ್ರೀ ಹೆಚ್ ಡಿ. ದೇವೇಗೌಡ.—ರಾಜ್ಯ ಹಿಂದೆ ಬಿದ್ದಿದೆ ಎನ್ನುವುದು ನಿಜ. ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳನ್ನು ಭೇಟಿ ಮಾಡಿದ್ದೇವೆ, ಹೇಳಿದ್ದೇವೆ, ಪತ್ರ ಬರೆದಿದ್ದೇವೆ, ಒತ್ತಾಯ ಮಾಡಿದ್ದೇವೆ. ಇನ್ನು ಸಂಬಂಧಪಟ್ಟ ಮಂತ್ರಿಗಳ ಮನೆಯ ಮುಂದೆ ಧರಣಿ ಮಾಡಬೇಕು ಎಂದರೆ ಮಾಡುತ್ತೇವೆ. ವೆಸ್ಟ್ ಬೆಂಗಾಲ್‌ನಲ್ಲಿ ಕುಳಿತಹಾಗೆ ಕೂಡಬೇಕು ಎಂದರೆ ಕೂರೋಣ. ಆ ರೀತಿ ಮಾಡುವುದು ಸರಿಯಲ್ಲ ಎನ್ನುವುದು ನಮ್ಮ ಭಾವನೆ. ಬೆಂಗಳೂರು–ಮೈಸೂರು ರಾಜ್ಯ ಹೆದ್ದಾರಿ. ಇಲ್ಲಿ ವಾಹನಗಳ ಸಂಚಾರ ಹಿಂದಿನದಕ್ಕಿಂತ ಇಪ್ಪತ್ತು ಬಹುಪಟ ಹತ್ತು ಪಟ್ಟು ಹೆಚ್ಚಾಗಿದೆ ಎಂದರೆ ಆಶ್ಚರ್ಯಪಡಬೇಕಾಗಿಲ್ಲ. ಅದಕ್ಕೋಸ್ಕರ ನಾವು ಫ್ಲೈಓವರ್ ಕರೆದಿರುವುದು. ಕೆಲಸ ಮಾಡುವುದಕ್ಕೆ ಅಲ್ಲ, ಅದಕ್ಕೆ ಸಂಬಂಧಪಟ್ಟ ಪ್ಲಾನ್, ನಕಾಶೆ ತಯಾರು ಮಾಡುವುದು ಸುಲಭವಲ್ಲ. ಪ್ರಿಲಿಮಿನರಿ ರಿಪೋರ್ಟ್ ತಯಾರು ಮಾಡಲಿಕ್ಕೆ ಕರೆದಿದ್ದೇವೆ. ೧೮ ಜನ ಪಾರ್ಟಿಸಿಪೇಟ್ ಮಾಡಿದ್ದಾರೆ. ಅದರಲ್ಲಿ ಯಾವುದನ್ನು ಒಪ್ಪಿಕೊಳ್ಳುವುದು ಎನ್ನುವುದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಗುಲ್ಬರ್ಗಾ ಜಿಲ್ಲೆಗೆ ಆಯವ್ಯಯದಲ್ಲಿ ನಿಗದಿಗೊಳಿಸಿರುವ ಕಾಮಗಾರಿಗಳು

೨೧೭. ಶ್ರೀ ಎ. ಮಲ್ಲಿಕಾರ್ಜುನ ಖರ್ಗೆ (ಗುರು ಮಿಠಕಲ್).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗ ಜಿಲ್ಲೆಯಲ್ಲಿ ಅದರಲ್ಲೂ ಯಾದಗಿರಿ ತಾಲ್ಲೂಕಿನಲ್ಲಿ ೧೯೮೬–೮೭ನೇ ಸಾಲಿನ ಆಯವ್ಯಯ ಪತ್ರಿಕೆಯಲ್ಲಿ ಮಂಜೂರಾದ ರಸ್ತೆ, ಸೇತುವೆ ಮತ್ತು ಕೆರೆಗಳ ಸಂಖ್ಯೆ ಎಷ್ಟು?

ಆ) ಇದರ ಪೈಕಿ ಎಷ್ಟು ಕೆಲಸಗಳು ಪ್ರಾರಂಭವಾಗಿರುತ್ತವೆ. (ಐಟಮ್) ಪ್ರಕಾರ ವರದಿಯನ್ನು ವಿವರಿಸಬೇಕು.

ಇ) ೧೯೮೬–೮೭ನೇ ಸಾಲಿನಲ್ಲಿ ಪ್ರತಿಯೊಂದು ಕೆಲಸಕ್ಕೆ ಒದಗಿಸಿದ ಒಟ್ಟು ಹಣದ ಮೊತ್ತ ಮತ್ತು ಈ ಕೆಲಸಗಳಿಗೆ ಖರ್ಚು ಮಾಡಿದ ಹಣವೆಷ್ಟು? (ಕೆಲಸಗಳ ವಾರ ವರದಿಯನ್ನು ವಿವರಿಸಬೇಕು).

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡ ಮತ್ತು ನೀರಾವರಿ ಸಚಿವರು).—

ಅ) ಗುಲ್ಬರ್ಗ ಜಿಲ್ಲೆಯಲ್ಲಿ ೧೯೮೬–೮೭ನೇ ಸಾಲಿನ ಆಯವ್ಯಯ ಪತ್ರಿಕೆಯಲ್ಲಿ ಸೇರಿರುವ ರಸ್ತೆ ಮತ್ತು ಸೇತುವೆಗಳ ಸಂಖ್ಯೆ;

				ಯಾದಗಿರಿ ತಾಲ್ಲೂಕಿನಲ್ಲಿ	
೧) ರಸ್ತೆಗಳು	...	೨೨೧	೧) ರಸ್ತೆಗಳು	...	೩೫
೨) ಸೇತುವೆಗಳು	...	೬೬	೨) ಸೇತುವೆಗಳು	...	೧೧
೩) ಸಣ್ಣ ನೀರಾವರಿ ಕೆಲಸಗಳು	...	೯೧	೩) ಸಣ್ಣ ನೀರಾವರಿ ಕೆಲಸಗಳು	...	೧೭

ಆ) ಗುಲ್ಬರ್ಗ ಜಿಲ್ಲೆಯಲ್ಲಿ ನಡೆಯುತ್ತಿರುವ ಕೆಲಸಗಳು ಈ ಕೆಳಗಿನಂತೆ ಇರುತ್ತವೆ.

೧) ರಸ್ತೆಗಳು	...	೮೫
೨) ಸೇತುವೆಗಳು	...	೨೦
೩) ಸಣ್ಣ ನೀರಾವರಿ ಕೆಲಸಗಳು	...	೫೫

ಗುಲ್ಬರ್ಗ ಜಿಲ್ಲೆ ಯಾದಗಿರಿ ತಾಲ್ಲೂಕಿನಲ್ಲಿ

೧) ರಸ್ತೆಗಳು	...	೧೭
೨) ಸೇತುವೆಗಳು	...	೨
೩) ಸಣ್ಣ ನೀರಾವರಿ ಕೆಲಸಗಳು	...	೧೨

೪) ಗುಲ್ಬರ್ಗ ಜಿಲ್ಲೆಯಲ್ಲಿ ೧೯೮೬-೮೭ನೇ ಸಾಲಿನಲ್ಲಿ ಒದಗಿಸಿದ ಹಣ ಮತ್ತು ಖರ್ಚು ಮಾಡಿದ ಹಣ ಈ ಕೆಳಗಿನಂತೆ ಇರುತ್ತದೆ.

	ಒದಗಿಸಿದ ಹಣ	ಜೂನ್ ೮೬ರ ಕೊನೆಗೆ ಖರ್ಚು ಮಾಡಿದ ಹಣ
೧) ರಸ್ತೆಗಳು	೧೬೨.೭೦ ಲಕ್ಷ ರೂಗಳು	೨೮.೯೮೩ ಲಕ್ಷ ರೂಗಳು
೨) ಸೇತುವೆಗಳು	೪೦.೨೬ ,,	೧೦.೯೧೬ ,,
೩) ಸಣ್ಣ ನೀರಾವರಿ ಕೆಲಸಗಳು	೩೯೩.೬೨ ,,	೧೯೨.೮೦೮ ,,

ಗುಲ್ಬರ್ಗ ಜಿಲ್ಲೆಯ ಯಾದಗಿರಿ ತಾಲ್ಲೂಕಿನಲ್ಲಿ

	ಒದಗಿಸಿದ ಹಣ	ಜೂನ್ ೮೬ರ ಕೊನೆಗೆ ಖರ್ಚು ಮಾಡಿದ ಹಣ
೧) ರಸ್ತೆಗಳು	೨೩.೬೧೦ ಲಕ್ಷ ರೂಗಳು	೫.೧೮೯ ಲಕ್ಷ ರೂಗಳು
೨) ಸೇತುವೆಗಳು	೪.೬೮೦ ,,	...
೩) ಸಣ್ಣ ನೀರಾವರಿ ಕೆಲಸಗಳು	೬.೨೦ ,,	೦.೫೮೯ ,,

ಯಾದಗಿರಿ ತಾಲ್ಲೂಕಿನ ಕೆಲಸಗಳ ವಿವರಗಳನ್ನು ಲಗತ್ತಿಸಿದೆ.

STATEMENT SHOWING THE LIST OF ON-GOING (ROADS & BRIDGES) BUDGETTED WORKS, GRANT ALLOTTED AND EXPENDITURE INCURRED DURING 1986-87 IN YADGIR TALUK.

Sl. No.	Head of Account and Name of work	Grant for 1986-87	Amount of estimate	Expenditure to end of March 1986	Expenditure during the year 1986-87	Cummulative expenditure	Stage of work
1	2	3	4	5	6	7	8
537 C. O. on R&B-Asphalting of Roads District Sector Scheme--							
1	B.T. to Yadgir-Sedam road.	1.00	3.00	1.236	...	1.236	Balance BT in KM 18,19 & 20 is in progress.
2	Recarpet to Hyderabad Bijapur road in Gurmitkal Section	...	3.00	4.332	...	4.332	Work completed in all respect.
	Total	1.00	6.00	5.568	...	5.568	

1	Impts, and metal to road from Hedgimudra to Tadak 0 to 2.5 KM	0.20	2.60	2.272	0.481	2.753	Earth work and Muram casing completed, C. D. works are in progress
2	Impts, to Yadgir, Hedgimudra road Km 4,5.6 and 7	0.20	2.60	1.442	...	1.442	Collection of murum and metal for full length completed, consolidation at Km 4 is in progress.
3	Impts. to Saidapur–Azlapur road KM 0 to 6.00	0.20	2.00	1.303	0.137	1.440	Work is completed.
4	Impts. to Nandepalli–Azlapur road Km. 9 to 15.00	...	3.00	3.295	0.184	3.479	Work completed exeept consolidation in Km 2.00.
5	Impts. to road from Belgera to Hongera	0.20	3.00	1.358	...	1.358	Earth work and muram collection completed, consolidation work is in progress.
6	Impts, to Gurmitkal–Durgapalli	0.20	2.50	1.489	...	1.439	Metalling completed B. T. work is in progress.
7	Impts. to Kandkoor–Madhwar road Km. 1 to 4 & 5.60 from 12 to 16.	0.20	2.50	2.495	0.024	2.519	Metalling in Km. 1,2,3, completed. Further work is in progress.

1	2	3	4	5	6	7	8
8	Impts. to Kandkoor–Madhwar from Gurmitkal Handerki.	0.20	2.20	0,734	0.065	0.799	B. T. in Km 1.00 completed. Further work is in progress.
9	Impts. to Kandkoor–Madhwar road Gurmikal Section Km. 8 to 13.30.	0.20	9.00	0.734	...	0.734	Collection of metal is in progress. Tender contractor has recommended vide this office Lr. No. CB/TND/ 6395 dt 6-12-85.
10	Impts, to Yadgir-Saidapur road.	...	3.00	1.302	0.032	1.334	Metal collection is in progress.
11	Formation of Yadgir–Raichur road (Saidapur–Section).	...	9.00	8.706	...	8.706	Work completed.
12	Impts, to road from Alipur to Achola via. Arkera 'B' Km 0 to 9.	...	4.80	4.880	...	4.880	Work completed.
13	Impts. to Approach road to Yadlapur Km 2 00	0.20	2 00	1.004	0.139	1.143	Metalling 1 00 Km completed, Further work is in progress.
14	Impts. to Arkera Gajarkote road Km 8,14 & 16.00	...	3.00	2.304	1.112	3.416	Out of two cause way one completed Other one at Km 14 00 is in progress

15	-do-approach road Kadechur village	0.20	2.50	0.189	0.280	0.469	Work taken up on piece work system. Metal collection work is in progress.
	Total	2.00	53.70	33.507	2.454	35.961	
537 C. O. on R&B-II-Other Roads Formation-A-State Sector Scheme.							
1	Impts, to Yadgir-Chitapur road.	5.00	10.00	4.443	1.255	5.696	The work is in progress.
2	-do-to Gurmitkal-Hundarki road.	1.00	3.00	2.457	1.041	3.489	-do-
	Total	6.00	13.00	6.90	2.296	9.185	
537 C. O. on R&B Constn. of New Bridges & Culverts Improvements to existing ones.							
1	Constn. of 3 Causeway at Kr 1, 9, 2, 10 & 5.10 on Munderga-Belgera road.	...	3.75	5.979	...	5.979	The work is completed.
2	Constn. of causeway across Tedalgera nala on Arkera Gajarkot road.	...	1.00	1.097	...	1.097	The work is completed.
3	-do-of bridge across Budoor nala on Gurmitkal Siddapur road.	...	2.50	2.697	...	2.697	-do-
4	Constn. of 2 Causeway on Yadgir-Hedgimudra road.	0.20	2.90	4.163	...	4.163	One causeway completed, another is in progress.

1	2	3	4	5	6	7	8
5	Constn. bridge across nala on Gurmitkal Siddapur road in km 10	0.50	3.25	2.745	...	2.745	Work started, Foundation excavation, C. C. bed completed except nala portion.
	Total	0.70	13.40	16.681	...	16.681	
537 C. O. on R&B Approach Road to Harijanwada.							
1	Approach road to Alipur Dodda-Sanna nala Yadgir	...	1.10	1.388	...	1.388	Work is completed Final bill to be paid.
537 C. O. Halli Heddari							
1	Approach road to pogla-pur village	...	1.00	1.136	0.050	1.186	The work is completed.
537 C. O. on R&B K. R. B. F. Works-I-M. N. P.							
1	Impts. to road to Belgunda village Km 5.00	2.50	7.55	2.695	0.311	3.006	Muram and metal collection is in progress.
2	Impts. to approach to Dupalli village Lenth 3.30 Km.	2.75	12.10	4.064	...	4.064	-do-
	Total	5.25	19.65	6 759	0.311	7.070	

STATEMENT SHOWING THE FRESH BUDGETTED ROADS AND BRIDGES WORKS GRANT ALLOTIED AND EXPENDITURE DURING THE YEAR 1986-87 IN YADGIR TALUKA

Sl. No.	Head of Account and Name of work	Amount of estimate in lakhs.	Budget grant for 86-87 Rs. in laksh	Expenditure incurred so far	Remarks
1	2	3	4	5	6
	537 C.O. on R&B.I. State Sector (Asphaing) (A) Road:				
1	Asphalting selected stretches of Gurumitkal Handerki Road Km. 11 to 19.00	7.50	2.50	...	The detailed plans and estimate are prepared are under process of Technical sanction.
2	537 C.O. on R&B Other Roads Formation II–District Sector Scheme				
1	Impts,to approach road from Arkera to Gajarkot.	1.50	0.22	...	do
2	-do- -do- to Tumakr.	2.00	0.30	...	do
3	-do- -do- Kudlur.	2.50	0.40	...	do
4	Formation and Impts. to approach road to Sourashtrahalli.	2.50	0.40	...	do

1	2	3	4	5	6
5	Impts. & Asphalting road from Gurumitkal to Putpak.	1.50	0.22	...	do
6	Formation & Impts. of selected stretches of Belgunda to Gudur via Bheemanhalli & Gandadgi	1.50	0.22	...	do
		11.50	1.76	...	
	537 C. O. on R&B Asphalting.-				
1	Asphalting Selected stretches of Gurumitkal Handerki Road.	2.00	0.33	...	The detailed plans and estimate are prepared and are under process of Technical sanction
2	Asphalting Yadgir Hedgimadra road.	2.00	0.30	...	do
	Total	4.00	0.60		
	537 C.O. on R&B (B) Rural Roads Mnp (Spl. Component Plan)				
1	Approach road to Yampad village 10.00 Kms.	9.50	3.20	...	do

	537 C. O. on R&B Approach Road to Harijan wada.				
1	Approach road to Konekal Harijanwada from Saidapur Branch road.	3.00	1.00	...	Estimate sanctioned and tenders invited.
	537 C. O. on R&B Halli Heddari (Plan)				
1	Approach road to Belgund village	2.00	0.90	...	The detailed plan & estimate are prepared under progress of technical sanction.
	Grand Total of Roads	30.00	7.46	...	
	(B) Bridges :-				
1	Constn. of causeway across Badyalnala on Approach road to Badyal village.	6.00	0.90	...	The detailed plans and estimate are prepared under progress fo technical sanction.
2	Constn. of bridge near Warkanhalli nala on Approach road to Warkanhalli village.	1.50	0.23	...	do
3	Constan. of Bridge on approach road to Wadanhalli.	2.00	0.30	...	do
4	Constn. of bridge across Yelhar nala on Kondkur Madhwar road.	8.00	1.20	...	do

1	2	3	4	5	6
5	Constd. of causeway across Lingeri nala on Yadgir Saidapur road.	5.00	0. 5	...	do
6	Constn. of Causeway across Totlur nala on Kandkur Madhwar road.	4.00	0.60	...	do
	Total	26.50	3.98	...	

STATEMENT SHOWING THE LIST OF ONGOING MINOR IRRIGATION WORKS IN YADGIR TALUK, GULBARGA DISTRICT. FOR 1986-87 (Rs in lakhs)

Sl. No.	Name of work	Grant for 1986-87	Amount of estimate	Expenditure to end of March' 86	Expenditure during the year 86-87	Cummulative expenditure	Stage of work
1	2	3	4	5	6	7	8
1	New Tank near Bupalli	0.40	10.74	242.86	0.138	6.515	Canal & CD works are in progress.
2	New Tank near Khanapura Hosahalli	0.05	4.64	6.729	–	–	Work physically completed.
3	Ngw Tank near Anpur	0.05	5.00	9.86	–	–	do

4	Restoration of Tank at Gurunur	0.15	5.00	9.287	–	–	do
5	Restoration of Tank at Janagamkeri Yampad tank	0.10	1.50	7.419	0.029	7.390	Work is in progress.
6	Improvements to feeder channel from Karanji project of Led tank Afzalpur	0.50	9.225	11.252	0.014	11.238	Work in is progress.
7	L.I.S. at Hedegamudra	0.10	9.40	8.902	0.038	8.864	Work is in progress
8	L.I.S. at Chinganur	0.10	6.90	16.556	0.330	16.235	Work is in progress.
9	L.I.S. at Lingeri	0.10	4.45	17.46	0.040	17.42	do
10	L.I S. at Kollur	0.05	4.00	1,50	–	–	do
11	L.I.S. at Tumkur	0.05	1.60	2.00	–	–	Work is physically completed
12	Extension of Canal to Stagena village from LIS.	0.05	2.00	–	–	–	Work is not started
	Total	1.70	63.185	113.816	0.589	67.462	

STATEMENT SHOWING THE LIST OF FRESH M. I. WORKS IN YADGIR TALUK GULBARGA DISTRICT FOR 1986-87

(Rs. in laksh)

Sl. No.	Name of taluk.	Name of work	Eestimated cost.	Budget allotment for 1986-87	Expenditure incurred so far	Remarks
1	2	3	4	5	6	7
1	Yadgir	New Tank at Lingeri	5.00	0.75	—	Investigation is urder progress
2	do	New Tank at Kanekal	5.00	0.75	—	do
3	do	New Tank at Arikera-B	4.00	0.60	—	Estimate is under sanction
4	do	New Anekat at Kantimani	6.00	0.90	—	Under invstigation
5	do	New Anekat at Konkal big and small	10.00	1.50	—	Estimate is under sanction.
			30.00	4.50		

ಈಗ ೧೧ ಲಕ್ಷರೂಪಾಯಿಗಳು ಖರ್ಚಾಗಿದೆ. ಸಣ್ಣ ನೀರಾವರಿಗಾಗಿ ೧೯೨೨ ಲಕ್ಷರೂಪಾಯಿಗಳನ್ನು ಈಗ ಖರ್ಚು ಮಾಡಿದ್ದೇವೆ. ಗುಲ್ಬರ್ಗಾ ಮತ್ತು ಯಾದಗಿರಿ ತಾಲ್ಲೂಕಿನ ರಸ್ತೆಗಳಿಗಾಗಿ ೫ ಲಕ್ಷ ರೂಪಾಯಿಗಳು ಖರ್ಚಾಗಿದೆ. ಸೇತುವೆಗಳನ್ನು ಮಾಡುವುದಕ್ಕೆ ೬೮,೦೦೦ ರೂಪಾಯಿ ಹಣ ಒದಗಿಸಿ, ೪ ಕೆಲಸಗಳು ಇನ್ನೂ ಪ್ರಿಲಿಮಿನರಿ ಸ್ಟೇಜ್‌ನಲ್ಲಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ೧೯೮೬-೮೭ರ ಬಡ್ಜೆಟ್‌ನಲ್ಲಿದ್ದಂತಹ ಕೆಲಸಗಳೇನಿವೆ ಅವೂ ಕೂಡ ಇನ್ನೂ ಪ್ರಾರಂಭವಾಗಿಲ್ಲವೆಂದು ತಾವು ಕೊಟ್ಟಂತಹ ವರದಿಯನ್ನು ನೋಡಿದರೆ ಗೊತ್ತಾಗುತ್ತದೆ. ಈಗ ತಾವೇನು ಖರ್ಚು ಎಂದು ತೋರಿಸಿದ್ದೀರಿ ಅದು ಆನ್ ಗೋಯಿಂಗ್ ವರ್ಕ್ಸ್‌ಗೆ. ಸುಮಾರು ೫ ವೈನರ್ ಇರಿಗೇಷನ್ ವರ್ಕ್ಸ್ ಈ ಬಡ್ಜೆಟ್‌ನಲ್ಲಿ ಬಂದಿದೆ. ಉದಾಹರಣೆಗೆ ಲಿಂಗೇರಿ ನ್ಯೂ ಟ್ಯಾಂಕ್ ಬಗ್ಗೆ ಹೇಳುವುದಾದರೆ, ಎಸ್ಟಿಮೇಟ್ ಇರುವುದು ೫ ಲಕ್ಷ, ಆದರೆ ಅದಕ್ಕೆ ಬಡ್ಜೆಟ್ಟಿನಲ್ಲಿ ಪ್ರಾವಿಷನ್ ಇರುವುದು ೭೫,೦೦೦ ರೂಪಾಯಿಗಳು. ಅದು ಇನ್‌ವೆಸ್ಟಿಗೇಷನ್ ಸ್ಟೇಜ್‌ನಲ್ಲಿದೆಯೆಂದು ಹೇಳಿದ್ದೀರಿ. ಇವೊತ್ತಿನವರೆಗೂ ಈ ಐದು ಕೆಲಸಗಳಿಗೆ ಒಂದು ನಯಾ ಪೈಸೆ ಖರ್ಚು ಆಗಿಲ್ಲ. ಅದೇ ರೀತಿ ರಸ್ತೆ ಹಾಗೂ ಬ್ರಿಡ್ಜಸ್ ಕೂಡ ಸೇರಿದೆ, ಅದರ ಮೇಲೂ ಸಹ ಒಂದು ನಯಾ ಪೈಸೆ ಖರ್ಚಾಗಿಲ್ಲ. ಖರ್ಚಾಗಿದೆ ಎಂದು ಕೊಟ್ಟಿದ್ದೀರಿ ಆದರೆ ಅದು ಹಿಂದಿನದು. ನಾನು ಪ್ರಶ್ನೆ ಕೇಳಿದ್ದುದು ೧೯೮೬-೮೭ರಲ್ಲಿ ತಾವು ಹೊಸ ಕೆಲಸಗಳಿಗಾಗಿ ಎಷ್ಟು ಹಣವನ್ನು ಒದಗಿಸಿದ್ದೀರಿ. ಎಷ್ಟು ಖರ್ಚಾಗಿದೆಯೆಂದು ? ಈ ಐದು ಶಿಂಗಳಲ್ಲಿ ಒಂದು ನಯಾ-ಪೈಸೆ ಖರ್ಚಾಗಿಲ್ಲ. ಇವುಗಳಿಗೆ ಅಡ್ಮಿನಿಸ್ಟ್ರೇಟಿವ್ ಅಪ್ರೂವ್ ಆಗಿಲ್ಲ. ಇದೇ ರೀತಿಯಾಗಿ ಈ ಒಂದು ವರ್ಷ ಕಳೆಯಿತೆಂದರೆ ಮತ್ತೆ ಮಾರ್ಚ್ ಕೊನೆ ಬಂದ ತಕ್ಷಣ ಖರ್ಚಾಗಿದೆ ಎಂದು ಎಕ್ಸ್‌ಪೆಂಡೀಚರ್ ತೋರಿಸುತ್ತಾರೆ. ಆದುದರಿಂದ ತಾವು ದಯವಿಟ್ಟು ಈ ಎಲ್ಲಾ ಎಸ್ಟಿಮೇಟ್ ಅನ್ನು ತರಿಸಿಕೊಂಡು ಬೇಗನೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಟ್ಟು ಕೆಲಸ ಪ್ರಾರಂಭ ಮಾಡಿ. ಎಸ್ಟಿಮೇಟ್ ೫ ಲಕ್ಷ ರೂಪಾಯಿಗಳಿದ್ದರೆ ೭೫,೦೦೦ ರೂಪಾಯಿಗಳು ಬಡ್ಜೆಟ್ಟಿನಲ್ಲಿ ಇದೆ. ಕಳೆದ ಸಲ ಹೇಳಿದ್ದಿರಿ $\frac{1}{3}$or $\frac{1}{4}$th ಇದ್ದರೂ ಅಪ್ರೂವ್ ಮಾಡುತ್ತೇವೆ ಎಂದು ಇದು 1/5th ಆಗುತ್ತದೆ. ಇವೆಲ್ಲವನ್ನೂ ಅಪ್ರೂವ್ ಮಾಡುತ್ತೀರಾ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.— ಈ ಸಂದರ್ಭದಲ್ಲಿ ನಾನು ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ, ಬಡ್ಜೆಟ್‌ನಲ್ಲಿರತಕ್ಕಂತಹ ಎಲ್ಲಾ ಕೆಲಸಗಳನ್ನೂ ತೆಗೆದುಕೊಳ್ಳುತ್ತೇವೆ. ಆದರೆ ಅವರೇ ಸೇತುವೆಗೆ ಮೂರು ಲಕ್ಷವೆಂದು ಬರೆದಿದ್ದಾರೆ. ಅದಕ್ಕೆ ೧೫ ಪರ್ಸೆಂಟ್ ಎಂದರೆ ೪೫,೦೦೦ ಇಟ್ಟಿದ್ದೇವೆ. Let me be very Plain and frank. ಇದರಲ್ಲಿ ಮೋಸ ಮಾಡುವ ಅವಶ್ಯಕತೆಯಿಲ್ಲ. ಎಸ್ಟಿಮೇಟ್ ಮಾಡಬೇಕೆಂದು ಹೇಳಿದಾಗ, ೯ ಲಕ್ಷವಾಗುತ್ತದೆ. ನಾನು ಇಲ್ಲಿ ೧೫ ಪರ್ಸೆಂಟ್ ಅಲೊಕೇಷನ್ ಇಟ್ಟಿದ್ದೇನೆ. ಅದಕ್ಕೆ ಕರೆಸ್ಪಾಂಡಿಂಗ್ ಗ್ಯಾರಂಟಿ ಹೆಚ್ಚು ಮಾಡಬೇಕಾಗುತ್ತದೆ. ತಾವೂ ಕೂಡ ಮಂತ್ರಿಗಳಾಗಿ ಕೆಲಸ ಮಾಡಿದವರು ತಪ್ಪಾಗಿ ಎಲ್ಲಾ ವಿಷಯ ಗೊತ್ತಿರುತ್ತದೆ. ಇದನ್ನೆಲ್ಲಾ ಪ್ರೊಸೆಸ್ ಮಾಡುವಾಗ ಅಂದರೆ ಪ್ಲಾನಿಂಗ್‌ನಿಂದ ಕೂಡ ಸ್ವಲ್ಪ ಡಿಲೇ ಆಗುತ್ತದೆ. ಬಡ್ಜೆಟ್‌ನಲ್ಲಿ ನಿಗದಿ ಮಾಡಿರತಕ್ಕಂತಹ ಕೆಲಸಗಳನ್ನು ಅಂದರೆ ಸಣ್ಣ ನೀರಾವರಿ ಇರಲಿ, ರಸ್ತೆ ಕಾರ್ಯ ಇರಲಿ, ಯಾವುದೇ ಕ್ಷೇತ್ರವಿರಲಿ ಭಿನ್ನ ಭೇದವಿಲ್ಲದೆ ಎಲ್ಲಾ ಕೆಲಸಗಳನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವಲಿಂಗಪ್ಪನವರು ಪ್ರಶ್ನೆ ಕೇಳಿದಾಗ ಹೇಳಿದರು ನಾನು ಸದನದಲ್ಲಿ ಯಾವ ಆಶ್ವಾಸನೆಯನ್ನು ಕೊಟ್ಟಿದ್ದೇನೆ ಅದನ್ನು ಪೂರೈಸಿದ್ದೇನೆಂದು. ಮಾನ್ಯ ಮಂತ್ರಿಗಳು ಹಾಗೂ ಮಾನ್ಯ ದೇವೇಗೌಡರವರು ನನ್ನ ಮತ ಕ್ಷೇತ್ರಕ್ಕೆ ಸ್ಪೆಷಲ್ ಅವರ ಬೈ ಎಲೆಕ್ಷನ್ ಆಗುತ್ತದೆನ್ನುವಾಗ ಎಂದರೆ ಪಾರ್ಲಿಮೆಂಟರಿ ಬೈ ಎಲೆಕ್ಷನ್ ಆಗುವ ಮುಂದೆ ಬಂದು ಟ್ಯಾಂಕ್ ಇನಾಗ್ಯುರೇಷನ್ ಮಾಡಿದರು. ಆರು ಸಾವಿರ ಎಕರೆಗೆ ನೀರು ಸಹ ಕೊಟ್ಟಿದ್ದರು. ಅವರ ಕೈಯ್ಯಲ್ಲೇ ಪ್ರಾರಂಭೋತ್ಸವಾಯಿತು. ಆಗ ನಾನು ಕೇಳಿದೆ ಮೂರು ಬಿಡ್ಜ್ ಮಾಡಿಕೊಡಿ ಸಬ್‌ಮರ್ಜಿಬಲ್ ವಿಲೇಜ್ ಇದೆ, ವಿಲೇಜ್ ಅಪ್ರೋಚ್ ಆಗಬೇಕಾದರೆ ತೊಂದರೆ ಯಾಗುತ್ತದೆ. ಆದುದರಿಂದ ಬ್ರಿಡ್ಜ್ ಮಾಡಿಕೊಡಿ ಎಂದು ಕೇಳಿದೆ. ಕಾರಂಜ, ಬಚಾವರ ಹಾಗೂ ಒರುಂಚ ಹೀಗೆ ಮೂರು ಬ್ರಿಡ್ಜ್ ಮಾಡಿ ಎಂದು ಇವರಿಗೆ ಬರೆದುಕೊಟ್ಟಿದ್ದೆ. ಖುದ್ದಾಗಿ ಭೇಟಿ ಸಹ ಮಾಡಿದ್ದೆ. ಕಳೆದ ಅಧಿವೇಶನದಲ್ಲಿ ಸಹ ಕೇಳಿದ್ದೆ. ಆದರೆ ದುರ್ದೈವ ಅದು ಬಜೆಟ್ಟಿನಲ್ಲಿ ಬರಲಿಲ್ಲ. ಅವರಿಗೆ ಕೊಟ್ಟಂತಹ ಆಶ್ವಾಸನೆ ಹಾಗೆಯೇ ನಡೆದುಕೊಂಡು ಹೋಗಲಿ, ಏಕೆ ಕೊಡಬೇಕು, ಎಂದು ತಮ್ಮ ಅಭಿಪ್ರಾಯವೇ ?

ಶ್ರೀ ಹೆಚ್. ಡಿ. ದೇವೇಗೌಡ.— ಪಟ್ಟಿ ಮಾಡತಕ್ಕಂತಹ ಕಾಲದಲ್ಲಿ ಅವರನ್ನೇ ಕೇಳಿದ್ದೇನೆ ಆದ್ಯತೆ ಮೇಲೆ ಕೊಡಿ ಎಂದು ಗುಲ್ಬರ್ಗಾ ಜಿಲ್ಲೆಯಲ್ಲಿ ಹೈಯೆಸ್ಟ್ ವರ್ಕ್ ಏನಾದರೂ ಇನ್‌ಕ್ಲೂಡ್ ಆಗಿದ್ದರೆ ಅದು ಮಾನ್ಯ ಖರ್ಗೆಯವರ ಕ್ಷೇತ್ರದಲ್ಲಿ. ಆ ಕೆಲಸಗಳನ್ನು ಬಿಟ್ಟು ಇದನ್ನು ತೆಗೆದುಕೊಳ್ಳಿ ಎಂದು ಇವರು ಹೇಳಿದರೆ, ಇವತ್ತೇ ಅದಕ್ಕೆ ಒಪ್ಪಿಗೆ ಕೊಡುತ್ತೇವೆ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.— ಸಾರ್ವಜನಿಕ ಸಭೆಯಲ್ಲಿ ಬಹಿರಂಗವಾಗಿ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ತಾವು ಆಶ್ವಾಸನೆ ಕೊಟ್ಟಿದ್ದೀರಿ, ಅದನ್ನು ಈಡೇರಿಸಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.— ಸಾರ್ವಜನಿಕ ಸಭೆಯಲ್ಲಿ ಮನವಿ ಪತ್ರ ಕೊಟ್ಟಿರುವವರು ಅವರೇ. ಆ ಕೆಲಸಕ್ಕೆ ಆದ್ಯತೆ ಕೊಡಿ, ಇದನ್ನು ಬಿಡಿ ಎಂದು ಹೇಳಿದರೆ ಈಗಲೇ ಒಪ್ಪಿಕೊಳ್ಳುತ್ತೇನೆ. ಈಗಾಗಲೇ ಸಾಕಷ್ಟು ಕೆಲಸಗಳನ್ನು ತೆಗೆದುಕೊಳ್ಳಬೇಕೆಂಬ ನಿರ್ಣಯ ಮಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ ಅದನ್ನು ಪರಿಶೀಲನೆಮಾಡುತ್ತೇನೆಂದು ಹೇಳಿದ್ದೇನೆ. ಸರ್ಕಾರದಲ್ಲಿ ಸ್ವಲ್ಪ ತೊಂದರೆಗಳು ಇದೆ. ಈ ಮೂರು ಕೆಲಸಗಳ ಕಡೆಗೆ ಗಮನ ಕೊಡುತ್ತೇನೆಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.— ಮಾನ್ಯ ಅಧ್ಯಕ್ಷರೇ, ಇದು ಅವರ ಕ್ಷೇತ್ರಕ್ಕೆ ಸಂಬಂಧ ಪಟ್ಟ ಪ್ರಶ್ನೆಯನ್ನು ನಾನು ಕೇಳುತ್ತಿಲ್ಲ. ಅವರ ಪ್ರಶ್ನೆಗೆ ನೇರವಾದ ಉತ್ತರವನ್ನು ಕೊಟ್ಟಿಲ್ಲ. ಆ ಜಿಲ್ಲೆಯ ರಸ್ತೆಗಳ ದುರಸ್ತಿಗಾಗಿ ಎಷ್ಟು ಹಣ ಕೊಟ್ಟಿದ್ದೀರಿ, ನೀರಾವರಿಗೆ ಎಷ್ಟು ಕೊಟ್ಟಿದ್ದೀರಿ ? ನಾನು ಕೇಳುತ್ತಿರುವುದು ಯಾದಗಿರಿ ತಾಲ್ಲೂಕಿನದಲ್ಲ. ಇವೊತ್ತಿನ ದಿವಸ ಗುಲ್ಬರ್ಗಾ ಜಿಲ್ಲೆಯಲ್ಲಿ ಯಾವುದು ಹಿಂದುಳಿದ ಪ್ರದೇಶವೆಂದು ತಮಗೇ ಗೊತ್ತಿದೆ. ಆ ಭಾಗಕ್ಕೆ ಎಷ್ಟು ದುಡ್ಡನ್ನು ಒದಗಿಸಿದ್ದೀರಿ ? ಬೇರೆ ಕಡೆಗೆ ಹೆಚ್ಚಿನ ದುಡ್ಡು ಒದಗಿಸಿದ್ದೀರಿ. ಆದರೆ ಅಲ್ಲಿ ಹೆಚ್ಚಿನ ದುಡ್ಡು ಒದಗಿಸಿ ಕೊಟ್ಟೂ ಕೂಡ ಕೆಲಸ ಪ್ರಾರಂಭವಾಗುತ್ತಿಲ್ಲ. ಟೋಕನ್ ಗ್ರ್ಯಾಂಟ್ ಕೊಡುತ್ತಿಲ್ಲ. ಆ ಜಿಲ್ಲೆಯ ಎಲ್ಲಾ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೆಲಸಗಳನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ನೇರವಾಗಿ ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.— ಇದಕ್ಕೆ ಈಗಾಗಲೇ ಉತ್ತರ ಹೇಳಿದ್ದೇನೆ. ಬಡ್ಜೆಟ್ಟಿನಲ್ಲಿ ಇಟ್ಟಿರತಕ್ಕಂತಹ ಎಸ್ಟಿಮೇಟ್ ಏನಿದೆ, ಅದರಲ್ಲಿ ಅವರು ಕೊಟ್ಟಿರತಕ್ಕಂಥಾದ್ದನ್ನು ಹಾಕಿದ್ದೇವೆ. ಯಾವುದು ಒಂದಕ್ಕೆ ಎರಡರಷ್ಟಾಗುತ್ತದೆ, ಅಂಥಾದಕ್ಕೆ ಒಂದು ಫಾರ್ಮಾಲಿಟೀಸ್ ಇದೆ. ಇರ್‌ರ್‌ಸ್ಪೆಕ್ಟೀವ್ ಆಗಿ ಎಲ್ಲಾ ಕ್ಷೇತ್ರಗಳನ್ನು ತೆಗೆದುಕೊಳ್ಳುತ್ತೇವೆ. ಈ ಮೂರು ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಸಾರ್ವಜನಿಕ ಸಭೆಯಲ್ಲಿ ನಾನು ಹೇಳಿದ್ದೇನೆ. ಹೆಚ್ಚಿನ ಕೆಲಸವನ್ನು ಅವರ ಕ್ಷೇತ್ರದಲ್ಲಿ ತೆಗೆದುಕೊಂಡಿದ್ದೇವೆ. ಅದು ಅವರಿಗೋಸ್ಕರವೆಂದು ಅಲ್ಲ. ಆ ಪ್ರದೇಶ ಹಿಂದುಳಿದಿದೆ ಎಂದು ಅದಕ್ಕೆ ಚ್ಚಿನ ಆದ್ಯತೆಯನ್ನು ಕೊಟ್ಟಿದ್ದೇವೆ.

ರಾಜ್ಯದ ಕರಾವಳಿ ತೀರದಲ್ಲಿ ಸಮುದ್ರ ಕೊರೆತದ ಬಗ್ಗೆ

೧೩೭. ಶ್ರೀ ಆರ್. ಎನ್. ನಾಯ್ಕ (ಭಟ್ಕಳ್).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶ ಅಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇತ್ತೀಚಿನ ಮೂರು ವರ್ಷಗಳಲ್ಲಿ ರಾಜ್ಯದ ತೀರ ಪ್ರದೇಶಗಳಲ್ಲಿ ಎಷ್ಟು ಕಡೆ ಸಮುದ್ರ ಕೊರೆತ ಉಂಟಾಗುತ್ತಿರುವುದನ್ನು ಗುರುತಿಸಲಾಗಿದೆ ?

ಆ) ಅವು ಎಲ್ಲೆಲ್ಲಿ ಆಗಿವೆ ?

ಇ) ಸಮುದ್ರ ಕೊರೆತ ತಡೆಯುವುದರ ಬಗ್ಗೆ ಎಲ್ಲೆಲ್ಲಿ ಕ್ರಮ ಜರುಗಿಸಲಾಗಿದೆ ? ಹಾಗೂ ಅದಕ್ಕೆ ಖರ್ಚಾದ ಹಣವೆಷ್ಟು ?

ಈ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಕರ್ಕಿ ಗ್ರಾಮದ ರಾಮೇಶ್ವರ ಕಂಚಿ ಶೆಡಿಕಳಿ ಜಾಗದಲ್ಲಿ ಸಮುದ್ರ ಕೊರೆತ ನಡೆಯುತ್ತಿರುವುದನ್ನು ಯಾವಾಗ ಗುರುತಿಸಲಾಗಿತ್ತು ? ಆದರಿಂದ ಅಲ್ಲಿ ಈಗ ಎಷ್ಟು ಎಕರೆ ಜಮೀನು ನಾಶವಾಗಿದೆ ?

ಉ) ಸಮುದ್ರ ಕೊರೆತ ತಡೆಯಲು ಈ ತನಕ ಕೈಗೊಂಡ ಕ್ರಮಗಳೇನು ?